# ಮೆಸ್ಸಿ V/S ರೊನಾಲ್ಡೊ



2018ರ ಫಿಫಾ ವಿಶ್ವಕಪ್ ಫುಟ್‌ಬಾಲ್ ಆರಂಭಕ್ಕೆ ತಿಂಗಳು ಮೊದಲು ಆಧುನಿಕ ಫುಟ್‌ಬಾಲ್‌ನ ಸರ್ವ ಶ್ರೇಷ್ಠ ಆಟಗಾರನನ್ನು ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಮತದಾನ ನಡೆದಿತ್ತು. ಕೆಲವು ಕೋಟಿ ಜನ ಲಯೊನೆಲ್ ಮೆಸ್ಸಿಗೆ, ಇನ್ನೊಂದಿಷ್ಟು ಕೋಟಿ ಜನ ಕ್ರಿಶ್ಚಿಯಾನೊ ರೊನಾಲ್ಡೊ ಅವರಿಗೆ ಮತ ಹಾಕಿದ್ದರು. ಫುಟ್‌ಬಾಲ್ ದಂತಕಥೆ ಬ್ರೆಜಿಲ್‌ನ ಪೆಲೆ ಅವರು ಯಾರಿಗೆ ಮತ ಹಾಕುತ್ತಾರೆ, ಅವರ ದೃಷ್ಟಿಯಲ್ಲಿ ಯಾರು ಶ್ರೇಷ್ಠ ಎನ್ನುವ ಕುತೂಹಲ ಎಲ್ಲರಲ್ಲಿಯೂ ಇತ್ತು. ಡಿಯಾಗೊ ಮರಡೋನ, ಮೆಸ್ಸಿ ಮತ್ತು ರೊನಾಲ್ಡೊ ಈ ಮೂವರಿಗೂ ಅವರು ಮತ ಹಾಕಿ 'ಇವರೇ ಸರ್ವ ಶ್ರೇಷ್ಠರು' ಎಂದಿದ್ದರು.

ನಾಲ್ಕು ಬಾರಿ ವಿಶ್ವಕಪ್‌ನಲ್ಲಿ ಆಡಿರುವ ಮರಡೋನ ನಿವೃತ್ತಿಯಾಗಿದ್ದಾರೆ. ಆದ್ದರಿಂದ ಈ ಬಾರಿಯ ಟೂರ್ನಿಯಲ್ಲಿ ಮೆಸ್ಸಿ ಮತ್ತು ರೊನಾಲ್ಡೊ ಇವರಲ್ಲಿ ಶ್ರೇಷ್ಠ ಆಟಗಾರ ಯಾರಾಗುತ್ತಾರೆ ಎನ್ನುವುದು ಈ ಸಲದ ಕುತೂಹಲ.

ಆಟದ ಕೌಶಲ, ಡ್ರಿಬ್ಲಿಂಗ್, ರಂಜನೆ, ಚೆಂಡಿನ ಮೇಲೆ ಹಿಡಿತ, ಪಾಸ್‌ಗಳನ್ನು ನೀಡುವ ಶೈಲಿ ಈ ಎಲ್ಲದರಲ್ಲೂ ಮೆಸ್ಸಿ ಮತ್ತು ರೊನಾಲ್ಡೊ ಸಮ ಸಾಮರ್ಥ್ಯ ಹೊಂದಿದ್ದಾರೆ. ಆದರೆ, ತಲಾ ಮೂರು ವಿಶ್ವಕಪ್‌ಗಳಲ್ಲಿ ಆಡಿದ್ದರೂ ತಮ್ಮ ದೇಶಕ್ಕೆ ಟ್ರೋಫಿ ತಂದುಕೊಡಲು ಇವರಿಗೆ ಸಾಧ್ಯವಾಗಿಲ್ಲ.

ಅರ್ಜೆಂಟೀನಾದ 30 ವರ್ಷದ ಮೆಸ್ಸಿ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಒಟ್ಟು 64 ಗೋಲುಗಳನ್ನು ಗಳಿಸಿದ್ದಾರೆ. ವಿಶ್ವಕಪ್‌ನ ಅರ್ಹತಾ ಸುತ್ತಿನಲ್ಲಿ 21 ಮತ್ತು ಪ್ರಧಾನ ಸುತ್ತಿನ ಪಂದ್ಯಗಳಲ್ಲಿ ಐದು ಗೋಲುಗಳನ್ನು ಕಲೆ ಹಾಕಿದ್ದಾರೆ. 2014ರ ವಿಶ್ವಕಪ್‌ನಲ್ಲಿ ಮೆಸ್ಸಿ ನಾಯಕತ್ವದಲ್ಲಿ ಅರ್ಜೆಂಟೀನಾ ತಂಡ ಫೈನಲ್‌ನಲ್ಲಿ ಜರ್ಮನಿ ವಿರುದ್ಧ ಸೋತು ರನ್ನರ್ಸ್ ಅಪ್ ಆಗಿತ್ತು. ಹಿಂದಿನ ಎರಡೂ ಟೂರ್ನಿಗಳಲ್ಲಿ ಕ್ರಮವಾಗಿ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿತ್ತು.

ರೊನಾಲ್ಡೊ ಪ್ರತಿನಿಧಿಸುವ ಪೋರ್ಚುಗಲ್ ತಂಡ 2006ರ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. 2010ರಲ್ಲಿ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿತ್ತು. ಬ್ರೆಜಿಲ್‌ನಲ್ಲಿ ನಡೆದ ಹಿಂದಿನ ವಿಶ್ವಕಪ್‌ನಲ್ಲಿ ಗುಂಪು ಹಂತದಿಂದಲೇ ಹೊರಬಿದ್ದಿತ್ತು.

## ರಸದೌತಣದ ಭಿನ್ನ ಆಟ

ಗೋಲುಗಳ ದಾಖಲೆ, ಹಣ ಸಂಪಾದನೆ, ಜನಪ್ರಿಯತೆ ಹೀಗೆ ಎಲ್ಲ ವಿಷಯಗಳಲ್ಲಿ ಬಹುತೇಕ ಸಮತೂಕದಲ್ಲಿರುವ ಮೆಸ್ಸಿ ಮತ್ತು ರೊನಾಲ್ಡೊ, ಅವರ ಆಟದ ಶೈಲಿಯಲ್ಲಿ ಸಾಕಷ್ಟು ಭಿನ್ನತೆಗಳಿವೆ. ಇವರ ಆಟ 'ತಲೆ ಮತ್ತು ಕಾಲಿನ ನಡುವಿನ ಸೆಣಸಾಟ' ಎಂದೂ ಖ್ಯಾತಿಯಾಗಿದೆ.

ಗೋಲು ಪೆಟ್ಟಿಗೆಯ ಸನಿಹದಲ್ಲಿರುವ ಚೆಂಡನ್ನು ಎಡಗಾಲಿನಿಂದ ಒದ್ದು ಗುರಿ ಸೇರಿಸುವುದರಲ್ಲಿ ಮೆಸ್ಸಿ ನಿಪುಣರು. ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಅವರು ಗಳಿಸಿರುವ ಒಟ್ಟು 64 ಗೋಲುಗಳ ಪೈಕಿ, 14 ಗೋಲುಗಳು ಎಡಗಾಲಿನಿಂದಲೇ ಬಂದಿವೆ. ಮೆಸ್ಸಿ ಐದು ಅಡಿ ಏಳು ಇಂಚು ಎತ್ತರ ಇರುವುದು ಅವರ ಆಟದ ಸೌಂದರ್ಯ ಹೆಚ್ಚಿಸಿದೆ.

ಆರು ಅಡಿ ಒಂದು ಇಂಚು ಎತ್ತರವಿರುವ ರೊನಾಲ್ಡೊ 'ಹೆಡರ್' ಮೂಲಕ ಗೋಲು ಗಳಿಸುವಲ್ಲಿ ಪರಿಣತರು. ಈ ತಂತ್ರ ಬಳಸಿ ಅವರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 'ಸೆಂಟರ್ ಬ್ಯಾಕ್' ಮೂಲಕ ಗೋಲು ಗಳಿಸುತ್ತಾರೆ.

2016–17ರ ಋತುವಿನಲ್ಲಿ ಎಲ್ಲ ಮಾದರಿಯ ಟೂರ್ನಿಗಳಿಂದ ಒಟ್ಟು 42 ಗೋಲು ಗಳಿಸಿದ್ದು, ಇದರಲ್ಲಿ ಎಂಟು ಗೋಲುಗಳು 'ಹೆಡರ್' ಮೂಲಕವೇ ಬಂದಿವೆ. ಈ ರೀತಿಯ ಆಟದ ತಂತ್ರದಲ್ಲಿ ರೊನಾಲ್ಡೊ ಅವರಷ್ಟು ಪಳಗಲು ಮೆಸ್ಸಿಗೆ ಇನ್ನೂ ಸಾಧ್ಯವಾಗಿಲ್ಲ. ಹಿಂದೊಮ್ಮೆ ರೊನಾಲ್ಡೊ ಆರು ಅಡಿ ಎಂಟು ಇಂಚು ಎತ್ತರ ಜಿಗಿದು ಚೆಂಡನ್ನು ಗುರಿ ಸೇರಿಸಿದ್ದು ಅಭಿಮಾನಿಗಳ ಕಣ್ಣಲ್ಲಿ ಈಗಲೂ ಸವಿ ನೆನಪಾಗಿ ಉಳಿದಿದೆ.

ಫ್ರೀ ಕಿಕ್ ಮೂಲಕ ಚೆಂಡನ್ನು ಹೊಡೆಯುವುದು, ಡ್ರಿಬ್ಲಿಂಗ್, ಚೆಂಡಿನ ಮೇಲೆ ಸಮತೋಲನ ಕಾಯ್ದುಕೊಳ್ಳುವುದು, ಚುರುಕಿನ ವೇಗ ಮೆಸ್ಸಿ ಆಟದಲ್ಲಿ ಕಾಣುವ ಉತ್ತಮ ಅಂಶಗಳು. ಮೆಸ್ಸಿ ವಿಶ್ವದ ಶ್ರೇಷ್ಠ ಡ್ರಿಬ್ಲರ್‌ಗಳಲ್ಲಿ ಮುಂಚೂಣಿಯಲ್ಲಿದ್ದಾರೆ.

ಮೆಸ್ಸಿ ಕ್ಲಬ್ ಮಟ್ಟದ ಪಂದ್ಯಗಳಲ್ಲಿ ಎದುರಾಳಿ ಆಟಗಾರರ ದಿಕ್ಕು ತಪ್ಪಿಸಿ ಚೆಂಡನ್ನು ತಮ್ಮ ತಂಡದ ಆಟಗಾರರ ಸುಪರ್ದಿಗೆ ಹೋಗುವಂತೆ ಮಾಡುವ 'ತಂತ್ರ'ದಲ್ಲಿ ಸಾಕಷ್ಟು ಅನುಭವ ಹೊಂದಿದ್ದಾರೆ. ಕ್ಲಬ್ ಮಟ್ಟದ ಟೂರ್ನಿಯಲ್ಲಿ ಒಂದೇ ವಾರದಲ್ಲಿ ಮೂರು ಫ್ರೀ ಕಿಕ್ ಅವಕಾಶವನ್ನು ಮೆಸ್ಸಿ



ವಿನ್ಯಾಸ: ದಿಲ್